ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 295 ಎಸ್‌ಪಿಎಸ್(1) 2008

ನಿರ್ದೇಶಕರವರಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು,
ದಿನಾಂಕ: 27-07-2017.

**ಇವರಿಗೆ,**
ಪ್ರಿನ್ಸಿಪಾಲರು
ಸರ್ಕಾರಿ ಪಾಲಿಟೆಕ್ನಿಕ್
ಬೀಳಗಿ

**ಮಾನ್ಯರೆ,**

ವಿಷಯ:- ಉಪಕರಣಗಳು ಮತ್ತು ಪೀಠೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಮಹಾಲೇಖಪಾಲರ ಆಕ್ಷೇಪಣೆಯ ಬಗ್ಗೆ.

**ಉಲ್ಲೇಖ:-**
1. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ, ಇವರ ಪತ್ರದ ಸಂಖ್ಯೆ: ಸಪಾಬೀ/ಇಎಸ್‌ಟಿ/2017-18/4311 ದಿನಾಂಕ: 12-07-2017
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಡಿಟಿಇ 295 ಎಸ್‌ಪಿಎಸ್(1) 2008 ದಿನಾಂಕ: 25-09-2008
3. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಡಿಟಿಇ 295 ಎಸ್‌ಪಿಎಸ್(1) 2008 ದಿನಾಂಕ: 01-08-2013

****

ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ, ಇವರು ಉಲ್ಲೇಖ (1) ರಲ್ಲಿ ನಮೂದಿಸಿರುವ ಪತ್ರದಲ್ಲಿ, ಮಹಾಲೇಖಪಾಲರು (G&SSA) ಲೆಕ್ಕ ಪರಿಶೋಧನೆಯಲ್ಲಿ, splitting up of purchases to surpass financial powers ಎಂದು ಆಕ್ಷೇಪಣೆ ವ್ಯಕ್ತಪಡಿಸಿರುವುದಲ್ಲದೆ, ರೂ. 46 ಲಕ್ಷಗಳ ಮೊತ್ತದ ಉಪಕರಣ/ಪೀಠೋಪಕರಣ/ಸಾಮಗ್ರಿಗಳನ್ನು ಕೊಟೇಷನ್ ಮುಖಾಂತರ ಖರೀದಿ ಮಾಡಿದ್ದು, KTPP ಕಾಯ್ದೆ ಉಲ್ಲಂಘನೆ ಆಗಿರುವ ಬಗ್ಗೆ ಆಕ್ಷೇಪಣೆ ಮಾಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ಆಕ್ಷೇಪಣೆಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸ ಕಾಲೇಜಿನಲ್ಲಿ ಉಪಕರಣಗಳು ಅತೀ ಅವಶ್ಯಕವಾಗಿ ಬೇಕಾಗಿರುವುದರಿಂದ 10 ದರಪಟ್ಟಿಗಳನ್ನು ಕರೆದು ಖರೀದಿ ಮಾಡಲಾಗಿದೆ, ಎಂದು ಉತ್ತರ ಕೊಡಲಾಗಿತ್ತು. ಆ ಉತ್ತರಕ್ಕೆ ಅವರು ಸಕ್ಷಮ ಪ್ರಾಧಿಕಾರ (competent authority) ಅವರಿಂದ ಈ ವಿಷಯವಾಗಿ Ratification Order ಪತ್ರ ಪಡೆದು ಮಹಾಲೇಖಪಾಲರಿಗೆ ಸಲ್ಲಿಸಲು ಸೂಚಿಸಿರುವುದರಿಂದ, Ratification Order ಪತ್ರವನ್ನು ನೀಡಬೇಕೆಂದು ಪ್ರಿನ್ಸಿಪಾಲರು ನಿರ್ದೇಶಕರಿಗೆ ಪತ್ರವನ್ನು ಬರೆದು ಕೋರಿರುವುದು ಸರಿಯಷ್ಟೆ.

ಅಲ್ಲದೆ ಪ್ರಸ್ತಾವನೆಗಳನ್ನು ವಿಭಜಿಸಿ ಖರೀದಿ ಪ್ರಕ್ರಿಯೆಗಳನ್ನು ನಡೆಸುತ್ತಿರುವ ಬಗ್ಗೆ ಇತರೆ ಪಾಲಿಟೆಕ್ನಿಕ್‌ಗಳಲ್ಲಿಯೂ, ಮಹಾಲೇಖಪಾಲರು ಲೆಕ್ಕ ತಪಾಸಣೆಯ ವೇಳೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದು ಗಮನಕ್ಕೆ ಬಂದಿರುತ್ತದೆ.

ಉಲ್ಲೇಖ (2) ಮತ್ತು (3) ರಲ್ಲಿ ನಮೂದಿಸಿರುವ ಈ ಕಛೇರಿಯ ಸುತ್ತೋಲೆಗಳಲ್ಲಿ, ಉಪಕರಣಗಳು, ಪೀಠೋಪಕರಣಗಳು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸುವಾಗ ಅನುಸರಿಸಬೇಕಾದ ಮಾರ್ಗಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ ಖರೀದಿ ಪ್ರಕ್ರಿಯನ್ನು ಕೈಗೊಳ್ಳುವಾಗ ಕೆ.ಟಿ.ಪಿ.ಪಿ ಅಧಿನಿಯಮ/ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂದು, ಒಂದು ಲಕ್ಷ ರೂ.ಗಳಿಗಿಂತ ಹೆಚ್ಚಿನ ಮೊತ್ತದ ಉಪಕರಣಗಳನ್ನು ಖರೀದಿಸಲು ಟೆಂಡರ್ ಕ್ರಮವನ್ನು ಅನುಸರಿಸಬೇಕೆಂದು ತಿಳಿಸಲಾಗಿದೆ. ಅಲ್ಲದೆ ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘಿಸುವ ಉದ್ದೇಶದಿಂದ ಪ್ರಸ್ತಾವನೆಗಳನ್ನು ವಿಭಜಿಸಿ ಖರೀದಿಗಳನ್ನು ಮಾಡಬಾರದೆಂದು ಸಹ ತಿಳಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ ಪ್ರಕರಣ 5 ರಲ್ಲಿ, ಟೆಂಡರ್ ಮೂಲಕವಲ್ಲದ ಇತರೆ ಸಂಗ್ರಹಣಕ್ಕೆ ನಿಷೇಧ ವಿಧಿಸಿದ್ದು, ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಯಾವುದೇ ಸಂಗ್ರಹಣಾ ಸಂಸ್ಥೆಯು ಟೆಂಡರನ್ನು ಆಹ್ವಾನಿಸುವ ಮೂಲಕವಲ್ಲದೆ ಸರಬರಾಜಿಗಾಗಿ ಸರಕುಗಳನ್ನು ಅಥವಾ ಸೇವೆಗಳನ್ನು ಸಂಗ್ರಹಣ ಮಾಡಿಕೊಳ್ಳತಕ್ಕುದಲ್ಲವೆಂದು ತಿಳಿಸಲಾಗಿದೆ. ಮುಂದುವರಿದಂತೆ ಪ್ರಕರಣ 23 ರಲ್ಲಿ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು , ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಆಯಾಕಾಲಕ್ಕೆ ಜಾರಿಯಲ್ಲಿರುವ ನಿಯಮಗಳನ್ನು ಅನುಸರಿಸಿ ಖರೀದಿಗಳನ್ನು ಮಾಡಬೇಕಾದ್ದು ಪ್ರತಿಯೊಬ್ಬ ಪ್ರಿನ್ಸಿಪಾಲರ ಕರ್ತವ್ಯವಾಗಿರುತ್ತದೆ. ನಿಯಮಗಳನ್ನು ಉಲ್ಲಂಘಿಸಿ ಮಾಡುವ ಎಲ್ಲಾ ಕಾರ್ಯಗಳಿಗೂ ಸಂಬಂಧಿಸಿದ ಪ್ರಿನ್ಸಿಪಾಲರುಗಳು ನೇರ ಜವಾಬ್ದಾರರಾಗಿರುತ್ತಾರೆ. ಪ್ರಿನ್ಸಿಪಾಲರುಗಳು ತಮ್ಮ ಹಂತದಲ್ಲಿ ಮಾಡುವ ಖರೀದಿ ಪ್ರಕ್ರಿಯೆಗಳಿಗೆ ಅವರುಗಳೇ ಹೊಣೆಗಾರರಾಗಿರುವುದರಿಂದ, ಇದಕ್ಕೆ ನಿರ್ದೇಶನಾಲಯವು Ratification Order ಪತ್ರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆಕ್ಷೇಪಣೆಗಳು ಉದ್ಭವಿದ್ದಲ್ಲಿ ಅವುಗಳನ್ನು ನಿಯಮಾನುಸಾರ ತಮ್ಮ ಹಂತದಲ್ಲಿಯೇ ಬಗೆಹರಿಸಿಕೊಳ್ಳಬೇಕೆಂದು ತಿಳಿಸಲಾಗಿದೆ. ಇಲ್ಲವಾದಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮದಲ್ಲಿ ವಿಧಿಸಿರುವಂತೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದು ಸೂಚನೆಯನ್ನು ನೀಡಲಾಗಿದೆ.

ಅನ್ವಯವಾಗುವ ಎಲ್ಲಾ ಸಂದರ್ಭಗಳಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ ಪ್ರಕರಣ 5 ರಂತೆ ಕ್ರಮ ಜರುಗಿಸಿ ಸರಕು ಮತ್ತು ಸೇವೆಗಳನ್ನು ಟೆಂಡರ್ ಆಹ್ವಾನಿಸುವ ಮೂಲಕವೇ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ. ಇತರೆ ಸಂಗ್ರಹಣಕ್ಕೆ ನಿಷೇಧ ವಿಧಿಸಿರುವುದರಿಂದ ಯಾವುದೇ ಸಂಧರ್ಭದಲ್ಲಯೂ ಪ್ರಸ್ತಾವನೆಗಳನ್ನು ವಿಭಜಿಸಿ ಸರಕು ಮತ್ತು ಸೇವೆಗಳ ಸಂಗ್ರಹಣಾ ಕಾರ್ಯವನ್ನು ಮಾಡಬಾರದೆಂದು ಇಲಾಖೆಯ ವತಿಯಿಂದ ಎಚ್ಚರಿಕೆಯನ್ನು ನೀಡಲಾಗಿದೆ.

ತಮ್ಮ ನಂಬುಗೆಯ

ನಿರ್ದೇಶಕರು

ಪ್ರತಿ:
1. ಈ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ
2. ಲೆಕ್ಕಾಧಿಕಾರಿಗಳು (ಬಿಲ್ಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಕಾರ್ಯನಿರ್ವಾಹಕರು, ಬಿಎಲ್‌ಎಸ್(3) ವಿಭಾಗ

ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

H. E- Governce.